ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 5, November-December 2025, Pp. 75-79
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಪೂರ್ಣಚಂದ್ರ ತೇಜಸ್ವಿ ಅವರ ಕರ್ವಾಲೊ ಕಾದಂಬರಿಯಲ್ಲಿ ವಿನೋದಪ್ರಜ್ಞೆ

**ಹೇಮಲತ ಕೆ.ಬಿ[1] ಮತ್ತು ಡಾ. ಎಂ.ಎನ್. ನಂದೀಶ[2]**
[1]ಸಂಶೊಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಕನ್ನಡ ವಿಭಾಗ, ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು(ಸ್ವಾಯತ್ತ), ಊಟಿ ರಸ್ತೆ, ಮೈಸೂರು.

***Abstract:***
*ಪೂರ್ಣಚಂದ್ರ ತೇಜಸ್ವಿ ಅವರು ಕನ್ನಡ ಕಥನ ಸಾಹಿತ್ಯದಲ್ಲಿ ಸುಪ್ರಸಿದ್ಧ ಲೇಖಕರು. ಇವರು ತಮ್ಮ ಸಾಹಿತ್ಯದ ಮೂಲಕ ಗ್ರಾಮೀಣ ಜೀವನ ಮತ್ತು ಮಾನವ ಸ್ವಭಾವದ ಸೂಕ್ಷ್ಮ ಗ್ರಹಿಕೆಗಳನ್ನು ಅತ್ಯಂತ ಸರಳ ರೂಪದಲ್ಲಿ ಜೊತೆಗೆ ಹೆಚ್ಚು ಪರಿಣಾಮಕಾರಿಯಾಗಿ ಹಿಡಿದಿಡುವ ಸಾಹಿತಿ. ಅವರ ಬರಹದ ನೈಜತೆಯು ಭಾಷೆಯ ಸರಳತೆ, ಅನುಭವದ ತೀವ್ರತೆ ಹಾಗೂ ಪಾತ್ರಗಳ ಜೀವಂತಿಕೆಯಲ್ಲಿ ನೆಲೆಸಿದೆ. ಈ ಎಲ್ಲ ಅಂಶಗಳಿಗೆ ಕಿರೀಟಪ್ರಾಯವಾಗಿ ಸಹೃದಯರನ್ನು ಹಿಡಿದಿಡುವ ಒಂದು ತಂತ್ರವೇ ತೇಜಸ್ವಿ ಅವರ ವಿನೋದಪ್ರಜ್ಞೆ. ಇವರ ಸಾಹಿತ್ಯವು ವಿನೋದವನ್ನು ಜೋಡಿಸುವ ಉದ್ದೇಶದಿಂದಷ್ಟೇ ಸೇರಿಸಲ್ಪಟ್ಟ ಸರಕಾಗಿರದೇ ಸಾಮಾನ್ಯ ಜೀವನದ ಹಾಗೂ ಪ್ರಕೃತಿಯ ಅಚ್ಚರಿಗಳನ್ನು ನೋಡಬಲ್ಲ ಸೂಕ್ಷ್ಮದೃಷ್ಟಿಯಿಂದ ರೂಪುಗೊಂಡಂತಹ ಅನುಭವವಾಗಿದೆ. ತೇಜಸ್ವಿ ಅವರ ಇಂತಹ ವಿಜ್ಞಾನದ ವಸ್ತುವೊಂದರಲ್ಲಿ ಸಮರ್ಥವಾಗಿ ಪ್ರತಿಫಲನಗೊಂಡಿರುವ 'ಕರ್ವಾಲೊ' ಕಾದಂಬರಿಯಲ್ಲಿನ ವಿನೋದ ಪ್ರಜ್ಞೆಯನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಕಾದಂಬರಿ, ಕರ್ವಾಲೊ, ತೇಜಸ್ವಿ.*

## ಪೀಠಿಕೆ

ವಿನೋದವು ಮಾನವ ಜೀವನದ ಅವಿಭಾಜ್ಯ ಅಂಗವಾಗಿದೆ. ಅರಿಸ್ಟಾಟಲ್‌ನು ವಿನೋದವನ್ನು ಆತ್ಮದ ವಿಶ್ರಾಂತಿಯೆಂದು ವಿವರಿಸಿದ್ದಾನೆ. ಭಾರತೀಯ ವಿದ್ವಾಂಸರ ಪ್ರಕಾರ 'ವಿನೋದವು ರಸಾನುಭವದ ರೂಪ'ವಾಗಿದೆ. ಶೃಂಗಾರದ ನಂತರದ ಸ್ಥಾನವನ್ನು ಹೊಂದಿರುವ ಹಾಸ್ಯವನ್ನು ಕುರಿತು ಭರತನು "ವಿಕಾರವಾದ ಅನ್ಯರ ವೇಷಾಲಂಕಾರಗಳು, ನಾಚಿಕೆಗೇಡಿನ ಸ್ವಭಾವ, ವಿಷಯಚಾಪಲ್ಯ, ಕುಚೇಷ್ಟೆ, ಕೆಟ್ಟಮಾತು, ಅಂಗವೈಕಲ್ಯ, ಇನ್ನೊಬ್ಬರ ಮೇಲೆ ದೋಷಾರೋಪಣೆ ಮೊದಲಾದ ವಿಭಾವಗಳಿಂದ ಇದು ಉದಿಸುತ್ತದೆ"[1] ಎನ್ನುತ್ತಾನೆ. ವಿಭಾವಗಳಿಂದ ಮಾನವನ ಸೃಜನಶೀಲತೆಯನ್ನು ಉತ್ತೇಜಿಸುವ ವಿನೋದವು ಸ್ನೇಹ ಮತ್ತು ಸಹಬಾಳ್ವೆಯನ್ನು ವೃದ್ಧಿಸುತ್ತದೆ. ತೇಜಸ್ವಿ ಅವರ ಕಥನಗಳು ಸಾಮಾನ್ಯವಾಗಿ ಮಲೆನಾಡು, ಕಾಡು, ಜಲಪಾತ, ಪ್ರಾಣಿ ಸಂಕುಲ ಹಾಗೂ ಅಲ್ಲಿ ಬದುಕುವ ಜನರ ಸುತ್ತಲೂ ಹೆಣೆಯಲ್ಪಟ್ಟಿರುತ್ತವೆ. ಮಂದಣ್ಣನಂತಹ ಗ್ರಾಮೀಣ ಪಾತ್ರಗಳು ತೇಜಸ್ವಿ ಅವರ ವಿಶ್ವದಲ್ಲಿ

[1]ತೀ.ನಂ.ಶ್ರೀ. (2016). *ಭಾರತೀಯ ಕಾವ್ಯ ಮೀಮಾಂಸೆ.* (ಹನ್ನೊಂದನೆಯ ಮುದ್ರಣ). ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಪುಟ.316

***Please cite this article as:*** ಹೇಮಲತ ಕೆ.ಬಿ. ಮತ್ತು ಎಂ.ಎನ್. ನಂದೀಶ. (2025). ಪೂರ್ಣಚಂದ್ರ ತೇಜಸ್ವಿ ಅವರ ಕರ್ವಾಲೊ ಕಾದಂಬರಿಯಲ್ಲಿ ವಿನೋದ ಪ್ರಜ್ಞೆ, *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(5), 75–79

ನೈಜತೆಯ ಗುರುತುಗಳಾಗುತ್ತವೆ. ತೇಜಸ್ವಿ ಅವರು ಕಠಿಣ ವಿಷಯಗಳನ್ನೂ ಸರಳ ಹಾಗೂ ಗಂಭೀರವಾದ ವಿನೋದದೊಂದಿಗೆ ಬೆಸೆಯುವ ಪರಿ ದೊಡ್ಡ ಮಟ್ಟದ ಓದುಗ ಬಳಗವನ್ನು ಸೆಳೆಯಲು ಕಾರಣವಾಗಿರುವ ಪ್ರಮುಖ ಅಂಶವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಹೊಸ ಪಥವನ್ನು ರೂಪಿಸಿದ ಸಾಹಿತಿ ತೇಜಸ್ವಿ, ನವ್ಯೋತ್ತರ ಕಾಲಘಟ್ಟದ ಪ್ರಮುಖ ಸಾಹಿತಿಗಳಾದ ಇವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಸಾಮಾಜಿಕ ವಿಮರ್ಶೆ, ವೈಚಾರಿಕತೆ. ವೈಜ್ಞಾನಿಕ ದೃಷ್ಟಿ ಹಾಗೂ ಗಂಭೀರವಾದ ವಿನೋದವನ್ನು ಸಮರ್ಥವಾಗಿ ರೂಪಿಸಿದವರು 'ಕರ್ವಾಲೊ' ಕಾದಂಬರಿ ವೈಜ್ಞಾನಿಕ ವಸ್ತುವನ್ನು ಹೊಂದಿದ್ದರೂ ಅದು ಒಂದು ರಹಸ್ಯ ಹಾಗೂ ಸಾಹಸ ಕಥೆಯಾಗಿ ಕಾಣುವುದರ ಜೊತೆಗೆ ಮಾನವ ಸ್ವಭಾವ, ಸಮಾಜದ ನಂಬಿಕೆಗಳು ಅಂಧಶ್ರದ್ಧೆ, ಅಧಿಕಾರಶಾಹಿತ್ವ ಹಾಗೂ ಬೌದ್ಧಿಕ ಅಂಧತ್ವಗಳನ್ನು ಕುರಿತು ವಿನೋದದ ಮೂಲಕ ನಡೆಸುವ ತೀಕ್ಷ್ಣವಾದ ಮುಖಾಮುಖಿಯಾಗಿದೆ.

ನಿರೂಪಕರು ಮೂಡುಗೆರೆಯ ಜೇನು ಸೊಸೈಟಿಯಲ್ಲಿ ಜೇನುತುಪ್ಪ ಕೊಳ್ಳುವ ಸಂವಾದದಿಂದ ಆರಂಭವಾಗುವ 'ಕರ್ವಾಲೊ' ಕಾದಂಬರಿಯು ಅಭಿವ್ಯಕ್ತಿ ಸ್ವರೂಪದಲ್ಲಿ ಸಾಂಪ್ರದಾಯಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಹೊಸ ಕ್ರಮವಿದೆ. ಜೇನು ಸೊಸೈಟಿಯಲ್ಲಿ ಕಾದಂಬರಿಯ ಕೇಂದ್ರ ಪಾತ್ರವಾದ ಮಂದಣ್ಣನ ಪರಿಚಯ ನಿರೂಪಕರಿಗಾಗುತ್ತದೆ. ಪಾತ್ರ ಪರಿಚಯ ಮಾಡುವ ಸಂದರ್ಭದಲ್ಲಿ ಮಂದಣ್ಣನು ಆತುರದ ಹಾಗೂ ಮುಗ್ಧತನದ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ಮಂದಣ್ಣನನ್ನು ವಿನೋದದ ರೂಪಕವಾಗಿ ನೋಡಲು ಮೂಡುಗೆರೆಯಲ್ಲಿ ಆಗಸ್ಟ್ ಹದಿನೈದನೇ ತಾರೀಖಿನಂದು ನಡೆದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭ ಸಾಕ್ಷಿಯಾಗುತ್ತದೆ. ಕಾರ್ಯಕ್ರಮಕ್ಕೆ ಮಂತ್ರಿವರ್ಯರು ಬಂದಾಗ ಮಂದಣ್ಣನ ಸ್ಕೌಟಿನ ತಂಡವು 'ಗಾರ್ಡ್ ಆಫ್ ಆನರ್' ಕೊಡಲು ತಯಾರಾಗಿತ್ತು. "ಮಂತ್ರಿಗಳು ಯಾಗ ಪುರೋಹಿತನ ಥರ ಮೂತಿ ಹಾಕಿಕೊಂಡು ಅತ್ತಿತ್ತ ಒಮ್ಮೆ ನೋಡಿ ಅನಂತರ ಮುದುರಿ ಕಟ್ಟಿದ್ದ ಧ್ವಜವನ್ನು ನೋಡುತ್ತಾ ಹಗ್ಗ ಎಳೆದರು."[2] ಧ್ವಜಾರೋಹಣದ ಸಮಯಕ್ಕೆ ಸರಿಯಾಗಿ ಮಂದಣ್ಣನ ಸ್ಕೌಟಿನ ತಂಡವು ಬ್ಯಾಂಡು ಬಜಾಯಿಸಲು ಪ್ರಾರಂಭಿಸಿದಾಗ ಆ ಶಬ್ಧಕ್ಕೆ ಸ್ಪಂದಿಸಿ ಕೆರಳಿದ "ಎರಡು ಹೆಜ್ಜೇನು ಗೂಡುಗಳು ಕೋಪಗೊಂಡು ಭುಸ್ಸನೆ ಎದ್ದವು. ಗಾಳಿಗೆ ಪಟ-ಪಟ ಬಡಿಯುತ್ತಿದ್ದ ಬಾವುಟಕ್ಕೆ, ಅದನ್ನು ಹಾರಿಸಿ ಹಿಂದಿರುಗುತ್ತಿದ್ದ ಸ್ಥೂಲಕಾಯದ ಮಂತ್ರಿಗಳಿಗೆ, ಪೋಲಿಸರಿಗೆ, ಪುಢಾರಿಗಳಿಗೆ, ಬ್ಯಾಂಡು ಬಜಾಯಿಸುತ್ತಿದ್ದ ಮಂದಣ್ಣನಿಗೆ, ಹುಡುಗರಿಗೆ, ಹೆಂಗಸರಿಗೆ, ದಾರಿ ಹೋಕರಿಗೆ ಒಂದರ ಮೇಲೊಂದರಂತೆ ಬಂದು ಟಪಟಪಟಪ ಕಚ್ಚತೊಡಗಿದವು. ಹೋ ಎಂದು ಕೂಗುತ್ತಾ ಜನ ಗಾಬರಿಯಿಂದ ಕಂಗಾಲು ಬಿದ್ದು ದಿಕ್ಕಾಪಾಲಾಗಿ ಓಡಿದರು. ಬ್ಯಾಂಡು ಹೊತ್ತುಕೊಂಡು ಓಡುತ್ತಿದ್ದ ಮಂದಣ್ಣ ಮುಗ್ಗರಿಸಿ ಬಿದ್ದು ಡ್ರಂ ಧಟಧಡ ಉರುಳಾಡಿಕೊಂಡು ಬೀದಿಯಲ್ಲಿ ಸಾಗಿ ಒಂದೆರಡು ಪೋಲಿಗೂಳಿಗಳೂ ಪುಢಾರಿಗಳ ಜೊತೆ ಬಾಲ ಎತ್ತಿಕೊಂಡು ಓಡ ತೊಡಗಿದವು."[3] ಈ ಸರಳ ವೈನೋದಿಕ ನೆಲೆ ಕೊಂಡೊಯ್ದು ಕೀರ್ತಿ ತೇಜಸ್ವಿ ಅವರದು. ವಾಸ್ತವ ಬದುಕಿನಲ್ಲಿ ಪುಢಾರಿ ರಾಜಕಾರಣಿಗಳ ಹಾಗೂ ಅವರ ಹಿಂಬಾಲಕರ ಆಷಾಢಭೂತಿತನವನ್ನು ಓದುಗರ ಮುಂದಿಡುವ ಹಾಗೂ ಇಂತಹ ಸಮಾರಂಭಗಳು ನಡೆದಾಗ ಸಾರ್ವಜನಿಕರಿಗೆ ಎದುರಾಗುವ ಅನಿರೀಕ್ಷಿತ ತೊಂದರೆಗಳ ಕುರಿತು ಅರಿವು ಮೂಡಿಸುತ್ತದೆ. ಈ ಘಟನೆಯನ್ನು ನೋಡಿ ಆನಂದಿಸಿದ ಹೈಸ್ಕೂಲು ಹುಡುಗರನ್ನು ಪೋಲಿಸರು ಅರೆಸ್ಟ್ ಮಾಡಿ ದೊಂಬಿ ಕೇಸು ಹಾಕಿ ವರ್ಷಾನುಗಟ್ಟಲೆ ಕೋರ್ಟಿಗೆ ಅಲೆಸುತ್ತಾರೆ. ಈ ಘಟನೆಯೊಂದಿಗೆ ವಾಸ್ತವದ

[2] ಪೂರ್ಣಚಂದ್ರ ತೇಜಸ್ವಿ, ಕೆ.ಪಿ. (2021). ಕರ್ವಾಲೊ. (ಐವತ್ತೊಂದನೇ ಮುದ್ರಣ). ಪುಸ್ತಕ ಪ್ರಕಾಶನ. ಪುಟ.16

[3] ಅದೇ., ಪುಟ.17

ಹಲವು ಒಳ ಸೂಕ್ಷ್ಮಗಳನ್ನು ಹಾಗೂ ವ್ಯವಸ್ಥೆಯ ಧೋರಣೆಯನ್ನು ವಿನೋದದ ಲೇಪದಿಂದ ಒರೆಗೆ ಹಚ್ಚಿದ್ದಾರೆ. ಸ್ವಾತಂತ್ರ್ಯ ದಿನಾಚರಣೆ ಆಚರಿಸಲು ಗಣ್ಯರನ್ನು ಕರೆಸುವುದು ಹಾಗೂ ರಾಜಕಾರಣಿಗಳು ಧ್ವಜಾರೋಹಣದ ನಂತರ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸುವ ಕಾರ್ಯವೂ ಇದ್ದುದರಿಂದ ಜನಸಂದಣಿ ಹೆಚ್ಚಲು ಕಾರಣವಾಯಿತು. ಅಲ್ಲದೆ ಪ್ರಕೃತಿಯ ನೀರವತೆಗೆ ಮನುಷ್ಯನು ಭಂಗ ತಂದಾಗ ತಲೆದೋರುವ ಅವಘಡದ ಅರಿವನ್ನೂ ಲೇಖಕರು ಇಲ್ಲಿ ತಿಳಿಸಿದ್ದಾರೆ. ಅಂದಿನ ಘಟನೆಗೆ ಏನೂ ಅರಿಯದ ಹೈಸ್ಕೂಲು ವಿದ್ಯಾರ್ಥಿಗಳನ್ನು ಆರೋಪಿಗಳನ್ನಾಗಿ ಮಾಡಿದ್ದು, ರಕ್ಷಣೆ ಕೊಡುವವರ ಅನಾಗರಿಕ ನಡವಳಿಕೆಯನ್ನು ಅರಿವಿಗೆ ತರುತ್ತದೆ. ಅಲ್ಲದೆ ಸಾಹಿತ್ಯ ಕೃತಿಯೊಂದರಲ್ಲಿ ಲೇಖಕರು ಒರೆಹಚ್ಚಿ ನೋಡುವಾಗ ಇಂತಹ ವಿಚಾರಗಳು ಒಂದು ಜನಾಂಗವನ್ನು ಎಚ್ಚರಿಸುವ ಸಾಮರ್ಥ್ಯವನ್ನು ಪಡೆಯುತ್ತವೆ.

'ಕರ್ವಾಲೊ' ಕಾದಂಬರಿಯ ಮತ್ತೊಂದು ವೈನೋದಿಕ ಸಾಧನೆ ಎಂದರೆ ಮಂದಣ್ಣನ ಮದುವೆ ಪ್ರಸಂಗ. ಮುಗ್ಧ ಆಸೆಗಳ ಮಂದಣ್ಣನು ತನ್ನ ಮಾವನಾದ ನಾರ್ವೆ ರಾಮಯ್ಯನ ಮಗಳಾದ ರಾಮಿಯನ್ನು ಮದುವೆಯಾಗಬೇಕೆಂಬ ಇಚ್ಛೆ ಹೊಂದಿದ್ದನು. ಆದರೆ ಮಂದಣ್ಣನಿಗೆ ಯಾವುದೇ ಉದ್ಯೋಗವಿಲ್ಲದ ಕಾರಣ ಮಗಳನ್ನು ಮದುವೆ ಮಾಡಿಕೊಡಲು ನಿರಾಕರಿಸುತ್ತಿದ್ದ ನಾರ್ವೆ ರಾಮಯ್ಯನ ಮನವೊಲಿಸಿ ಕೊನೆಗೆ ಮದುವೆ ನಿಶ್ಚಯವಾಗುತ್ತದೆ.

ಮದುವೆ ದಿನ ಫೋಟೋಗ್ರಾಫರ್ ಪ್ರಭಾಕರ ವಯಸ್ಸಾದವನಂತೆ ಕಾಣಬೇಕೆಂದು ಮಂದಣ್ಣ ವಿಧಿಸಿದ್ದ ಕೋರಿಕೆ ಅವನ ಹಗುರ ಬುದ್ದಿಯನ್ನು ತೋರಿಸುತ್ತದೆ. ಇನ್ನು ಮದುವೆ ಶಾಸ್ತ್ರ ನಡೆಯುವಾಗ ಹೆಂಗಸರು ಚಿನ್ನದ ಗುಣಮಟ್ಟದ ಕುರಿತು ಹಗುರ ಮಾತನಾಡಿದಾಗ ಗಲಾಟೆ ಆರಂಭವಾಗುತ್ತದೆ. ಇದನ್ನು ಪರಿಹರಿಸಲು ಪ್ರಭಾಕರನು ಮಾಡಿದ ತಂತ್ರವಾಗಿ "ಆ ನಿಮಿಷದಲ್ಲಿ ದೈವಕೃಪೆ ಎಂಬಂತೆ ಫಳ್ ಎಂದು ಒಂದು ಮಿಂಚು ಎಲ್ಲರ ಕಣ್ಣನ್ನೂ ಕುಕ್ಕಿತು. ಆ ಕ್ಷಣ ಮದುವೆ ಮನೆಯ ರಣರಂಗದ ನಡುವೆ ಇದ್ದವರೆಲ್ಲರೂ ಚಕಿತರಾಗಿ ಹೋದರು."[4] ನಂತರ ಗಲಾಟೆ ಶಮನವಾಯಿತು. ಮದುವೆ ಎಲ್ಲ ಮುಗಿಸಿ ಕರ್ವಾಲೊ ನಿರೂಪಕರು ಹಾಗೂ ಪ್ರಭಾಕರ ಹೊರಡಲು ಅನುವಾಗುತ್ತಾರೆ. ಆದರೆ ಹೆಣ್ಣಿನ ಕಡೆಯವರು ಮತ್ತೆ ಗಲಾಟೆ ಶುರುಮಾಡುವ ವಿಚಾರ ತಿಳಿದು ಲಕ್ಷ್ಮಣನು "ನೀವೂ ಸಾಹೇಬ್ರೂ ಎಲ್ಲಾ ಹೊರಡಿ ಸಾರ್, ನಾನು ನಿಧಾನಕ್ಕೆ ಬರ್ತೀನಿ. ಪ್ರಸ್ಥನೂ ಮಾಡಿ ಮುಗಿಸೇ ಬರ್ತೀನಿ." ಎನ್ನುತ್ತಾನೆ. ಆಗ ನಿರೂಪಕರು 'ಅದಕ್ಕೇನೂ ಫೋಟೋಗ್ರಾಫರ್ ಬೇಡ ತಾನೆ ನಿಂಗೆ' ಎಂದು ಮಂದಣ್ಣನನ್ನು ಕುರಿತು ಹೇಳುವ ಮಾತು ವಾಸ್ತವದ ನಡುವೆ ತೂರಿ ಬಿಡುವ ವಿನೋದದ ಎಳೆಯಂತೆ ಸಹೃದಯನನ್ನು ಮುದಗೊಳಿಸುತ್ತದೆ. ಈ ಸನ್ನಿವೇಶವು ಸಮಾರಂಭಗಳಲ್ಲಿ ಛಾಯಾಚಿತ್ರಕ್ಕಾಗಿ ತೋರುವ ಕೃತಕ ಮುಖಭಾವ ಹಾಗೂ ವ್ಯಕ್ತಿಗಳು ತಮ್ಮ ಗಾಂಭೀರ್ಯವನ್ನು ಮರೆತು ತೋರುವ ನಡವಳಿಕೆಗಳನ್ನು ವಿನೋದದ ಮೂಲಕ ತಿಳಿಸುತ್ತದೆ. ಮಂದಣ್ಣನ ಮದುವೆಯ ದಿನ ಗದ್ದಲದ ವಾತಾವರಣವನ್ನು "ಲಕ್ಷ್ಮಣನೂ, ಪ್ರಭಾಕರನೂ ಕಣ್ಣು ಮಿಟುಕಿಸಿಕೊಂಡು ಫೋಟೋ ತೆಗೆಸುತ್ತಾ ಮಾಡಿಸಿದ ಮದುವೆ" ಎಂಬ ವಿಚಾರ ತಿಳಿದ ನಂತರ ಕರ್ವಾಲೊ ಕೂಡ ನಗುತ್ತಾರೆ. ಇದು ಸಣ್ಣ–ಸಣ್ಣ ವಿಚಾರಗಳು ಮನುಷ್ಯನನ್ನು ನಿಯಂತ್ರಿಸುವ ಬಗೆಯನ್ನು ತಿಳಿಸುತ್ತದೆ. ಹಾರುವ ಓತಿಯನ್ನು ಅನ್ವೇಷಿಸಲು ಹೋದ ಸಂದರ್ಭದಲ್ಲಿಯೂ ಮಿಂಚುಳ್ಳಿಯ ಫೋಟೋವನ್ನು ತೆಗೆಯಲು ಪ್ರಭಾಕರ ವಿಫಲನಾದಾಗ ತೇಜಸ್ವಿ ಅವರು "ನಿನಗೆ ಫೋಸು ಕೊಡುತ್ತಾ ಕಾದುಕೊಂಡು ಕೂರೋದಕ್ಕೆ ಇದೇನು ಮಂದಣ್ಣನ ಮದುವೆ ಅಂತ ಮಾಡಿದ್ದೀಯ?"

[4] ಅದೇ., ಪುಟ.51

ಎನ್ನುವುದು ಪ್ರಕೃತಿಯ ಕ್ರಿಯಾಶೀಲತೆ ಹಾಗೂ ಮಾನವನ ಜಡತೆಯನ್ನು ಒಟ್ಟಿಗೆ ತಿಳಿಸುತ್ತದೆ.

ಕರ್ವಾಲೊ ಹಾರುವ ಓತಿಯ ಅನ್ವೇಷಣೆಗಾಗಿ ನಿರೂಪಕ, ಪ್ರಭಾಕರ ಹಾಗೂ ಕರಿಯಪ್ಪರೊಡಗೂಡಿ ಹೊರಡುತ್ತಾರೆ. ಪ್ರಯಾಣದಲ್ಲಿ ಜೀವ ವಿಕಾಸದ ಹಲವು ಆಯಾಮಗಳ ಕುರಿತು ತಿಳಿಸುತ್ತಾ ಪ್ರಕೃತಿಯ ನಿಗೂಢತೆಯನ್ನು ವಿವರಿಸುತ್ತಾರೆ. ದಾರಿ ಮಧ್ಯೆ ಎಂಗ್ಟನನ್ನು ತಮ್ಮ ಕೆಲಸಕ್ಕೆ ತೊಡಗಿಸಿಕೊಳ್ಳಲು ಅವರ ಮನೆ ಬಳಿಗೆ ಹೋಗುತ್ತಾರೆ. ಆಗ ಅಲ್ಲಿದ್ದ ಎಂಗ್ಟನ ನಾಯಿ ಹಾಗೂ ತೇಜಸ್ವಿ ಅವರ 'ಕಿವಿ' ನಾಯಿಯ ನಡುವೆ ನಡೆದ ಮೂಕ ಸಂಭಾಷಣೆಯನ್ನು ತೇಜಸ್ವಿ ಅವರು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. "ಶವದಂತೆ ಬಿದ್ದಿದ್ದ ಅದಕ್ಕೆ ತಟಕ್ಕನೆ ಪ್ರಾಣ ಸಂಚಾರವಾಗಿ ಸ್ಪ್ರಿಂಗಿನಂತೆ ನೆಗೆದು ಎದ್ದು ಗುರ್ರನೆ ಕಿವಿಯ ಮೇಲೆ ಏರಿಹೋಯ್ತು. ಆದರೆ ಕಿವಿ ಒಳ್ಳೇ ರಾಜಕಾರಣಿ. ಆ ನಾಯಿ ಒಂದೆರೆಡು ಮಾರು ದೂರವಿರಬೇಕಾದರೆ ತನ್ನೆರಡೂ ತುಟಿಗಳನ್ನೂ ಮೇಲೆತ್ತಿ ಒಳ್ಳೇ ಹೊಳಪುಕೊಟ್ಟ ಗರಗಸದಂತಿದ್ದ ಎರಡು ದಂತಪಂಕ್ತಿಗಳನ್ನೂ ಪ್ರದರ್ಶಿಸಿತು. ತನ್ನ ಆಯುಧೋಪಕರಣಗಳ ವಿವರಗಳನ್ನೂ ಅವುಗಳ ಉಪಯೋಗದಿಂದ ಮುಂದೊದಗಬಹುದಾದ ದುಷ್ಪರಿಣಾಮಗಳನ್ನೂ ಅದಕ್ಕೆ ಮನದಟ್ಟಾಗುವಂತೆ ತೋರಿಸಿತು. ಈ ಗಂಭೀರವಾದ ಬಿಳಿಯ ನಾಯಿಯ ಬಳಿ ಇರುವ ಯುದ್ಧೋಪಕರಣಗಳನ್ನು ನೋಡಿದ ಕೂಡಲೇ ಎಂಗ್ಟನ ನಾಯಿಗೆ ದಿಗಿಲಾಯ್ತು."[5] ತೇಜಸ್ವಿ ಅವರ ತೀಕ್ಷ್ಣ ಆಲೋಚನಾಶಕ್ತಿ ಇದರಿಂದ ತಿಳಿಯುತ್ತದೆ. ಯಾವುದೇ ವಿಚಾರವನ್ನು ಆಮೂಲಾಗ್ರವಾಗಿ ಗ್ರಹಿಸುವ ಅಷ್ಟೇ ಸೂಕ್ಷ್ಮವಾಗಿ ಸಹೃದಯನ ಮುಂದಿಡುವ ಕಲೆ ತೇಜಸ್ವಿ ಅವರ ದೊಡ್ಡ ಶಕ್ತಿ. ನಾಯಿ 'ತನ್ನ ರಕ್ಷಣಾ ನೀತಿಯನ್ನು ಬದಲಿಸಿ ಕೇವಲ ಮರ್ಯಾದೆ ಉಳಿಸಿಕೊಳ್ಳಲ ದೂರದಿಂದಲೇ ಬೊಗಳಿತು' ಎಂಬ ಮಾತು ಜೀವಿಗಳ ಆಂತರ್ಯ ಹಾಗೂ ಆಲೋಚನಾ ಕ್ರಮವನ್ನು ಅರಿತ ಸಾಹಿತ್ಯ ಸೂಕ್ಷ್ಮತೆಯನ್ನು ತೆರೆದಿಡುತ್ತದೆ. ಅಲ್ಲದೆ ಯಾವುದೇ ಸನ್ನಿವೇಶವನ್ನೂ ಕಣ್ಮುಂದೆ ಘಟಿಸುತ್ತಿದೆ ಎನ್ನುವಂತೆ ವೈನೋದಿಕ ಧಾಟಿಯಲ್ಲಿ ನಿರೂಪಿಸುವುದು ಓದುಗನ ಆಲೋಚನೆಯನ್ನು ಎಚ್ಚರಗೊಳಿಸಲು ಸಾಧ್ಯವಾಗುತ್ತದೆ.

[5] ಅದೇ., ಪುಟ.128

"ಮಂದಣ್ಣನೆಂಬ ಮನುಷ್ಯನ ಪ್ರಕೃತಿಯಿಂದ ಹಿಡಿದು ಹಾರುವ ಓತಿಯ ವಿಕಾಸದವರೆಗೆ ಅಪಾರ ಕುತೂಹಲವಿರುವ"[6] 'ಕರ್ವಾಲೊ' ಕಾದಂಬರಿಯಲ್ಲಿ ಇನ್ನೂ ಸಾಕಷ್ಟು ವೈನೋದಿಕ ಸನ್ನಿವೇಶಗಳನ್ನು ಗುರುತಿಸಬಹುದಾಗಿದೆ. ಕರಿಯಪ್ಪನ ಬೇಟೆಯ ಆಸಕ್ತಿ, 'ಕಿವಿ' ನಾಯಿಯ ಹಲವು ಸನ್ನಿವೇಶಗಳು, ಹಾರುವ ಓತಿಯನ್ನು ಹಿಡಿಯುವ ಸನ್ನಿವೇಶ, ಕರಿಯಪ್ಪ ಉಡವನ್ನು ಹಿಡಿದು ಹಾರುವ ಓತಿಯನ್ನೇ ಹಿಡಿದೆ ಎನ್ನುವ ಸನ್ನಿವೇಶ, ಇತ್ಯಾದಿ ಸನ್ನಿವೇಶಗಳು ಮನುಷ್ಯನ ಆತುರ, ದುರಾಸೆಗಳ ಜೊತೆಗೆ ಪ್ರಕೃತಿಯ ಮುಂದೆ ಮಾನವ ಎಷ್ಟು ನಿಸ್ಸಹಾಯಕ ಎಂಬುದನ್ನು ತೇಜಸ್ವಿ ಅವರು ವಿನೋದದ ಎಳೆಯ ಮೂಲಕ ನಿರೂಪಿಸುತ್ತಾ ಹೋಗುತ್ತಾರೆ.

ತೇಜಸ್ವಿ ಅವರು ತಮ್ಮ ಸಾಹಿತ್ಯದಲ್ಲಿ ಮೂಡಿಗೆರೆಯ ಗ್ರಾಮೀಣ ಭಾಷೆಯನ್ನೇ ಅದ್ಭುತವಾಗಿ ದುಡಿಸಿಕೊಂಡಿದ್ದಾರೆ. ಮಂದಣ್ಣನ ಮದುವೆಯ ಸನ್ನಿವೇಶವನ್ನು ವಿವರಿಸುವಾಗ "ಢಂಮ್ ಢಂಮ್ಕು ಢಂಮ್ಕು ಢಂಮ್ಕು"[7] ಎನ್ನುವ ಶಬ್ದಾನುಕರಣೆ ಓದುಗನಲ್ಲಿ ಸಂತೋಷ ಮೂಡಿಸುವುದರೊಂದಿಗೆ ಲೇಖಕರ ಕ್ರಿಯಾಶೀಲತೆಯನ್ನು ಅರಿವಿಗೆ ತರುತ್ತದೆ. ಮಂದಣ್ಣನ "ಮದುವೆಯನ್ನು ಹಂತ–ಹಂತವಾಗಿ

[6] ಕರೀಗೌಡ ಬೀಚನಹಳ್ಳಿ. (2017). *ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ.* (ಮೂರನೆಯ ಮುದ್ರಣ). ನವ ದೆಹಲಿ ಸಾಹಿತ್ಯ ಅಕಾಡೆಮಿ. ಪುಟ. 95

[7] ಪೂರ್ಣಚಂದ್ರ ತೇಜಸ್ವಿ, ಕೆ.ಪಿ. (2021). *ಪೂರ್ವೋಕ್ತ.* ಪುಟ.48

ಅಭಿನಯಿಸತೊಡಗಿದರು"[8] ಎನ್ನುವಾಗ ಮಾನವನ ಆಲೋಚನಾ ಕ್ರಮವನ್ನೇ ತಿಳಿಸುವ ಶಕ್ತಿಯನ್ನು ಆ ಮಾತಿಗೆ ನೀಡುತ್ತಾರೆ. ಹಾರುವ ಓತಿಯನ್ನು ಹಿಡಿಯುವ ಸಂದರ್ಭದಲ್ಲಿ ಪ್ರಭಾಕರ ಕ್ರೋನೋಮೀಟರಿನಿಂದ ದಿಕ್ಕನ್ನು ಪರಿಶೀಲಿಸುವಾಗ ಅದನ್ನು ಕಂಡ ಕರಿಯಪ್ಪ "ಈ ಮಿಷನ್ನಿನಾಗೇನ್ಕಾಣ್ತದೆ? ಓತೀಕ್ಯಾತನಾ?"[9] ಎನ್ನುವ ಮಾತು ಬದುಕಿನ ಸಣ್ಣ ಸನ್ನಿವೇಶವನ್ನೂ ವೈನೋದಿಕ ನೆಲೆಯಲ್ಲಿ ಕಟ್ಟಿಕೊಡುವ ಸಾಹಿತಿಯೊಬ್ಬರ ಬರಹದ ಅಗಾಧ ಶಕ್ತಿಯನ್ನು ತಿಳಿಸುತ್ತದೆ.

"ಪ್ರಜ್ಞೆಯ ವಿಸ್ತಾರ ಮತ್ತು ಶೋಧನೆಯ ಸಂಭ್ರಮ ಈ ಕಾದಂಬರಿಯ ಉತ್ಕರ್ಷದ ಸ್ಥಿತಿಗಳಾಗಿವೆ."[10] ತೇಜಸ್ವಿ ಅವರ ಬರಹವು ವಿನೋದ ಸಾಹಿತ್ಯವಲ್ಲ. ಬದಲಿಗೆ ವಿನೋದವನ್ನು ಒಂದು ತಂತ್ರವಾಗಿ ಬಳಸಿ ಕಂಡುಕೊಂಡ ಹೊಸ ಬಗೆಯ ನಿರೂಪಣಾ ವಿಧಾನವಾಗಿದೆ. ತೇಜಸ್ವಿ ಅವರು ಕಥೆಯ ಎಳೆಯನ್ನು ವಿಜ್ಞಾನಕ್ಕೆ, ಮಾನವನ ಆಲೋಚನೆಗೆ ಹಾಗೂ ಪ್ರಕೃತಿಯ ಅಗಾಧ ಶಕ್ತಿಯೊಡನೆ ಸಮೀಕರಿಸುವ ಜೊತೆ–ಜೊತೆಗೆ ಇದೆಲ್ಲವನ್ನೂ ಗಂಭೀರವಾದ ವಿನೋದದ ಮೂಲಕ ಅಭಿವ್ಯಕ್ತಪಡಿಸುವ ಯಶಸ್ವೀ ಪ್ರಯತ್ನವಾಗಿದೆ ಎನ್ನಬಹುದು.

**ಆಕರ ಗ್ರಂಥ**


- ಪೂರ್ಣಚಂದ್ರ ತೇಜಸ್ವಿ, ಕೆ.ಪಿ. (2021). ಕರ್ವಾಲೊ. (ಐವತ್ತೊಂದನೇ ಮುದ್ರಣ). ಪುಸ್ತಕ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಅಶೋಕ, ಟಿ.ಪಿ. (2015). *ತೇಜಸ್ವಿ ಕಥನ.* (ಮೂರನೇ ಮುದ್ರಣ). ಅಕ್ಷರ ಪ್ರಕಾಶನ.
- ಕರೀಗೌಡ ಬೀಚನಹಳ್ಳಿ. (2017). *ಕೆ.ಪಿ.ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ.* (ಮೂರನೆಯ ಮುದ್ರಣ). ನವ ದೆಹಲಿ ಸಾಹಿತ್ಯ ಅಕಾಡೆಮಿ.
- ನರಸಿಂಹಮೂರ್ತಿ ಹಳೇಹಟ್ಟಿ ಮತ್ತು ಕಿಶೋರ್ ಚಿಂತಾಮಣಿ. (ಸಂ.) (2025). *ಕನ್ನಡದ ತೇಜಸ್ಸು.* ಸಖೀಗೀತ ಪ್ರಕಾಶನ
- ಸುಂಕಾಪುರ, ಎಂ.ಎಸ್. (2021). *ಕನ್ನಡ ಸಾಹಿತ್ಯದಲ್ಲಿ ಹಾಸ್ಯ.* (ಮೂರನೇ ಮುದ್ರಣ). ಸಪ್ನ ಬುಕ್ ಹೌಸ್.
- ತೀ.ನಂ.ಶ್ರೀ. (2016). *ಭಾರತೀಯ ಕಾವ್ಯ ಮೀಮಾಂಸೆ.* (ಹನ್ನೊಂದನೆಯ ಮುದ್ರಣ). ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ


[8] ಅದೇ., ಪುಟ.50
[9] ಅದೇ., ಪುಟ.104
[10] ಕರೀಗೌಡ ಬೀಚನಹಳ್ಳಿ, (2017). *ಪೂರ್ವೋಕ್ತ.* ಪುಟ.93